**All India Radio: Bangalore**
**National Bulletins In Kannada**
**15.07.2025 / 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಆಕ್ಸಿಯಮ್-೪ ಮಿಷನ್; ಅಂತಾರಾಷ್ಟ್ರೀಯ ಬ್ಯಾಹ್ಯಾಕಾಶ ನಿಲ್ದಾಣದಿಂದ ಶುಭಾಂಶು ಶುಕ್ಲಾ ಸೇರಿ ನಾಲ್ವರು ಗಗನಯಾತ್ರಿಗಳು ಇಂದು ಭೂಮಿಗೆ

೨. ಚೀನಾದ ಟಿಯಾಂಜಿನ್ ನಗರದಲ್ಲಿಂದು ನಡೆಯಲಿರುವ ಎಸ್‌ಸಿಒ ವಿದೇಶಾಂಗ ಸಭೆಯಲ್ಲಿ ಸಚಿವ ಡಾ.ಎಸ್.ಜೈಶಂಕರ್ ಭಾಗಿ

೩. ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವ ದೇಶಗಳ ಮೇಲೆ ಹೆಚ್ಚುವರಿ ಶೇಕಡ ೧೦೦ ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಎಚ್ಚರಿಕೆ

೪. ಆಂಡರ್ಸನ್-ತೆಂಡಲ್ಕೂರ್ ಟೆಸ್ಟ್ ಕ್ರಿಕೆಟ್ ಟ್ರೋಫಿ; ಭಾರತದ ವಿರುದ್ಧದ ೫ ಪಂದ್ಯಗಳ ಸರಣಿಯಲ್ಲಿ ೨-೧ ಅಂತರದಿಂದ ಇಂಗ್ಲೆಂಡ್ ಮುನ್ನಡೆ

**><><><><><><><><><><><><**

ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಸೇರಿದಂತೆ ಆಕ್ಸಿಯಮ್-೪ ಮಿಷನ್‌ನ ನಾಲ್ವರು ಗಗನಯಾತ್ರಿಗಳು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ೧೮ ದಿನಗಳನ್ನು ಕಳೆದ ನಂತರ ಇಂದು ಭೂಮಿಗೆ ಮರಳಲಿದ್ದಾರೆ. ಅವರು ನಿನ್ನೆ ಕಕ್ಷೆಯಲ್ಲಿರುವ ಪ್ರಯೋಗಾಲಯವಾದ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ Sಠಿಚಿಛಿeಫಿ ಡ್ರ್ಯಾಗನ್‌ನಲ್ಲಿ ಭೂಮಿಗೆ ಸುಮಾರು ೨೨ ಗಂಟೆಗಳ ಪ್ರಯಾಣಕ್ಕಾಗಿ ಯಾನ ಆರಂಭಿಸಿದರು. ಭಾರತೀಯ ಕಾಲಮಾನ ಇಂದು ಮಧ್ಯಾಹ್ನ ೩ ಗಂಟೆಗೆ ಅಮೆರಿಕದ ಕ್ಯಾಲಿಫೋರ್ನಿಯಾ ತಲುಪಲಿದ್ದಾರೆ. ಭೂಮಿಗೆ ಇಳಿದ ನಂತರ, ಗ್ರೂಪ್ ಕ್ಯಾಪ್ಟನ್ ಶುಕ್ಲಾ ಮತ್ತು ಇತರೆ ಗಗನಯಾತ್ರಿಗಳೊಂದಿಗೆ ಭೂಮಿಯ ಗುರುತ್ವಾಕರ್ಷಣೆಗೆ ಹೊಂದಿಕೊಳ್ಳಲು ಫ್ಲೈಟ್ ಸರ್ಜನ್‌ಗಳ ಮೇಲ್ವಿಚಾರಣೆಯಲ್ಲಿ ೭ ದಿನಗಳ ಪುನರ್ವಸತಿ ಕಾರ್ಯಕ್ರಮಕ್ಕೆ ಒಳಗಾಗುತ್ತಾರೆ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಮೊದಲ ಭಾರತೀಯ ಶುಭಾಂಶು ಶುಕ್ಲಾ ಆಗಿದ್ದಾರೆ. ಅಲ್ಲದೇ ೧೯೮೪ ರಲ್ಲಿ ಬಾಹ್ಯಾಕಾಶಕ್ಕೆ ತೆರಳಿದ್ದ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ನಂತರ ಗ್ರೂಪ್ ಕ್ಯಾಪ್ಟನ್ ಶುಕ್ಲಾ ಎರಡನೇ ಭಾರತೀಯ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಕಾರ್ಯಾಚರಣೆ ಸಮಯದಲ್ಲಿ, ಗ್ರೂಪ್ ಕ್ಯಾಪ್ಟನ್ ಶುಕ್ಲಾ ಭಾರತದ ನಿರ್ದಿಷ್ಟ ಏಳು ಪ್ರಯೋಗಗಳನ್ನು ನಡೆಸಿದರು. ಐಎಸ್‌ಎಸ್‌ನಲ್ಲಿ ತಮ್ಮ ವಿದಾಯ ಭಾಷಣದಲ್ಲಿ, ಗ್ರೂಪ್ ಕ್ಯಾಪ್ಟನ್ ಶುಕ್ಲಾ ತಮ್ಮ ಬಾಹ್ಯಾಕಾಶ ಪ್ರಯಾಣವನ್ನು ಅದ್ಭುತ ಎಂದು ಬಣ್ಣಿಸಿದ್ದಾರೆ. ಬಾಹ್ಯಾಕಾಶದಿಂದ ಭಾರತವು ಹೆಮ್ಮೆ, ಮಹತ್ವಾಕಾಂಕ್ಷೆ, ನಿರ್ಭೀತಿ ಹಾಗೂ ಆತ್ಮವಿಶ್ವಾಸದಿಂದ ಕಾಣುತ್ತದೆ ಎಂದು ಹೇಳಿದರು. ೧೯೮೪ ರಲ್ಲಿ ಭಾರತದ ಮೊದಲ ಗಗನಯಾತ್ರಿ ರಾಕೇಶ್ ಶರ್ಮಾ ಅವರ ಸಾಂಪ್ರದಾಯಿಕ ಮಾತುಗಳನ್ನು ಪುನರಾವರ್ತಿಸುತ್ತಾ, ಭಾರತ ’ಸಾರೆ ಜಹಾನ್ ಸೆ ಅಚ್ಛಾ’ ಎಂದು ನುಡಿದರು. ಆಕ್ಸಿಯಮ್-೪ ಕಾರ್ಯಾಚರಣೆಯಲ್ಲಿ ಶುಭಾಂಶು ಶುಕ್ಲಾ ಜೊತೆಗೆ, ಅಮೆರಿಕಾದ ಕಮಾಂಡರ್ ಪೆಗ್ಗಿ ವಿಟ್ಸನ್ ಮತ್ತು ಮಿಷನ್ ತಜ್ಞರಾದ ಪೋಲೆಂಡ್ ಹಾಗೂ ಹಂಗೇರಿಯ ಸ್ಲಾವೋಸ್ಜ್ ಉಜ್ನಾನ್ಸ್ಕಿ-ವಿಸ್ನಿವ್ಸ್ಕಿ ಮತ್ತು ಟಿಬೋರ್

ಕಪು ಅವರನ್ನು ಹೊತ್ತ ಸ್ಪೇಸ್‌ಎಕ್ಸ್ ಫಾಲ್ಕನ್ ೯ ಅನ್ನು ಫ್ಲೋರಿಡಾದ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಜೂನ್ ೨೫ ರಂದು ಉಡಾವಣೆ ಮಾಡಲಾಯಿತು.

><><><><><><><><><><><

ಎರಡು ದಿನಗಳ ಒಡಿಶಾ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಮ್ಮ ಎರಡನೇ ದಿನದ ಭೇಟಿಯಲ್ಲಿ ಇಂದು, ರಾವೆನ್‌ಶಾ ವಿಶ್ವವಿದ್ಯಾಲಯದ ೧೩ನೇ ವಾರ್ಷಿಕ ಘಟಿಕೋತ್ಸವದಲ್ಲಿ ಭಾಗವಹಿಸಲಿದ್ದಾರೆ ಹಾಗೂ ಕಟಕ್‌ನಲ್ಲಿರುವ ರಾವೆನ್‌ಶಾ ಬಾಲಕಿಯರ ಪ್ರೌಢಶಾಲೆಯ ಮೂರು ಕಟ್ಟಡಗಳ ಪುನರಾಭಿವೃದ್ಧಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ೧೫ನೇ ಶತಮಾನದಲ್ಲಿ ಜನಿಸಿದ ಶ್ರೇಷ್ಠ ಒಡಿಯಾ ಕವಿ ಮತ್ತು ವಿದ್ವಾಂಸ ಆದಿಕವಿ ಸರಳಾ ದಾಸ್ ಅವರ ಜನ್ಮ ವಾರ್ಷಿಕೋತ್ಸವದ ಆಚರಣೆಯಲ್ಲಿ ರಾಷ್ಟ್ರಪತಿಗಳು ಭಾಗವಹಿಸಲಿದ್ದಾರೆ ಮತ್ತು ೨೦೨೪ ರ ಕಳಿಂಗ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ.

><><><><><><><><><><><

ಭಾರತ-ಚೀನಾ ಸಂಬಂಧಗಳು ಸಕಾರಾತ್ಮಕ ದಿಕ್ಕಿನಲ್ಲಿ ಸಾಗುತ್ತಿವೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಬೀಜಿಂಗ್‌ನಲ್ಲಿ ನಿನ್ನೆ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರೊಂದಿಗಿನ ಸಭೆಯ ನಂತರ ಮಾತನಾಡಿದ ಡಾ.ಎಸ್.ಜೈಶಂಕರ್, ಕಳೆದ ಒಂಬತ್ತು ತಿಂಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಭಾರತ-ಚೀನಾ ಉತ್ತಮ ಪ್ರಗತಿ ಸಾಧಿಸಿವೆ ಎಂದು ಹೇಳಿದರು. ಇದಕ್ಕೂ ಮೊದಲು, ವಿದೇಶಾಂಗ ಸಚಿವರು, ಚೀನಾದ ಉಪಾಧ್ಯಕ್ಷ ಹಾನ್ ಝೆಂಗ್ ಅವರೊಂದಿಗೆ ಸಭೆ ನಡೆಸಿದರು. ಇಂದು ಟಿಯಾಂಜಿನ್ ನಗರದಲ್ಲಿ ನಡೆಯಲಿರುವ ಎಸ್‌ಸಿಒ ವಿದೇಶಾಂಗ ಸಚಿವರ ಸಭೆಯಲ್ಲಿ ಡಾ.ಎಸ್.ಜೈಶಂಕರ್ ಭಾಗವಹಿಸಲಿದ್ದಾರೆ.

><><><><><><><><><><><

ರಷ್ಯಾದಿಂದ ತೈಲ, ಅನಿಲ ಮತ್ತು ಯುರೇನಿಯಂ ಆಮದು ಮಾಡಿಕೊಳ್ಳುವ ದೇಶಗಳ ಮೇಲೆ ಹೆಚ್ಚುವರಿಯಾಗಿ ಶೇಕಡ ೧೦೦ ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಉಕ್ರೇನ್ ಜೊತೆಗಿನ ಯುದ್ಧವನ್ನು ಕೊನೆಗೊಳಿಸುವಲ್ಲಿ ರಷ್ಯಾದ ನಿಷ್ಠುರತೆಯ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಮೆರಿಕದ ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಷ್ಯಾ ಉಕ್ರೇನ್ ಜೊತೆ ಶಾಂತಿ ಒಪ್ಪಂದ ಮಾಡಿಕೊಳ್ಳದಿದ್ದರೆ, ದಂಡನಾತ್ಮಕ ಸುಂಕ ಜಾರಿಗೆ ಬರಲು ೫೦ ದಿನಗಳ ಗಡುವು ನೀಡಿದರು. ಸುಂಕ ನೀತಿ ಜಾರಿಗೆ ಬಂದರೆ, ಅಮೆರಿಕದೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲು ಮುಂದಾಗಿರುವ ಭಾರತದ ಮೇಲೆ ಪರಿಣಾಮ ಬೀರಲಿದೆ. ರಷ್ಯಾದಿಂದ ಇಂಧನ ಉತ್ಪನ್ನಗಳನ್ನು ಖರೀದಿಸುವ ದೇಶಗಳ ಮೇಲೆ ಶೇಕಡ ೫೦೦ ರಷ್ಟು ಸುಂಕ ವಿಧಿಸುವ ಪ್ರಸ್ತಾವಿತ ಮಸೂದೆಯನ್ನು ಬೆಂಬಲಿಸುವುದಾಗಿ ಡೊನಾಲ್ಡ್ ಟ್ರಂಪ್ ಹೇಳಿದರು. ಇನ್ನೊಂದೆಡೆ, ರಷ್ಯಾದಿಂದ ತೈಲ ಖರೀದಿಯನ್ನು ಭಾರತ ಸಮರ್ಥಿಸಿಕೊಂಡಿದೆ. ರಷ್ಯಾದಿಂದ ತೈಲ ಖರೀದಿಯು ದೇಶದ ಅಭಿವೃದ್ಧಿಗೆ ಅಗತ್ಯವಾಗಿರುತ್ತದೆ ಮತ್ತು ಅಂತಾರಾಷ್ಟ್ರೀಯ ತೈಲ ಬೆಲೆಗಳನ್ನು ಸ್ಥಿರಗೊಳಿಸಲು ಸಹಾಯ ಮಾಡುತ್ತದೆ ಎಂದು ಭಾರತ ಹೇಳಿದೆ.

><><><><><><><><><><><

ಕೆನಡಾದ ಟೊರೊಂಟೊದಲ್ಲಿ ನಡೆದ ಜಗನ್ನಾಥ ರಥಯಾತ್ರೆ ಮೆರವಣಿಗೆಯ ಸಮಯದಲ್ಲಿ ನಡೆದ ಮೊಟ್ಟೆ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಿದ್ದು, ಈ ಕೃತ್ಯವನ್ನು ಹೇಯ ಎಂದು ಕರೆದಿದೆ ಮತ್ತು ಇದಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೆನಡಾದ ಅಧಿಕಾರಿಗಳನ್ನು ಒತ್ತಾಯಿಸಿದೆ. ಘಟನೆಯ ಕುರಿತು ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವಾಲಯದ ವಕ್ತಾರ

ರಣಧೀರ್ ಜೈಸ್ವಾಲ್, ಈ ಕೃತ್ಯದ ಹಿಂದಿನ ಅಪರಾಧಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಭಾರತವು ಕೆನಡಾದ ಅಧಿಕಾರಿಗಳಿಗೆ ಬಲವಾಗಿ ಆಗ್ರಹಿಸಿದೆ ಎಂದು ಹೇಳಿದರು.

><><><><><><><><><><><

ಲಂಡನ್‌ನ ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಅಂಡರ್ಸನ್-ಟೆಂಡೂಲ್ಕರ್ ಟ್ರೋಫಿಯ ಮೂರನೇ ಟೆಸ್ಟ್ ಪಂದ್ಯದಲ್ಲಿ ರವೀಂದ್ರ ಜಡೇಜಾ ಅವರ ವಿರೋಚಿತ ಪ್ರಯತ್ನದ ನಡುವೆಯೂ, ಇಂಗ್ಲೆಂಡ್ ತಂಡ ಭಾರತವನ್ನು ೨೨ ರನ್‌ಗಳಿಂದ ಮಣಿಸಿದೆ. ಐದನೇ ಮತ್ತು ಕೊನೆಯ ದಿನದಾಟದಲ್ಲಿ, ಇಂಗ್ಲೆಂಡ್ ನೀಡಿದ್ದ ೧೯೩ ರನ್‌ಗಳ ಗುರಿಯನ್ನು ಬೆನ್ನತ್ತಿದ ಭಾರತ, ೧೭೦ ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು. ಜಡೇಜಾ ಅಜೇಯ ೬೧ ರನ್‌ಗಳೊಂದಿಗೆ ಕಣದಲ್ಲೇ ಉಳಿದರು. ಇಂಗ್ಲೆಂಡ್ ಪರ ಜೊಫ್ರಾ ಆರ್ಚರ್ ಮತ್ತು ಬೆನ್ ಸ್ಟೋಕ್ಸ್ ತಲಾ ೩ ವಿಕೆಟ್ ಪಡೆದರು. ಉತ್ತಮ ಪ್ರದರ್ಶನಕ್ಕಾಗಿ ಬೆನ್ ಸ್ಟೋಕ್ಸ್ ಅವರಿಗೆ ಪಂದ್ಯ ಶ್ರೇಷ್ಠ ಪ್ರಶಸ್ತಿ ನೀಡಲಾಯಿತು. ಈ ಗೆಲುವಿನೊಂದಿಗೆ ಇಂಗ್ಲೆಂಡ್, ೫ ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ೨-೧ ಅಂತರದಿಂದ ಮುನ್ನಡೆ ಸಾಧಿಸಿದೆ.

><><><><><><><><><><><

ಜಾರ್ಜಿಯಾದ ಬಟುಮಿ ನಗರದಲ್ಲಿ ನಡೆಯುತ್ತಿರುವ ಫಿಡೆ ಮಹಿಳಾ ವಿಶ್ವಕಪ್ ಚೆಸ್ ಸ್ಪರ್ಧೆಯಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್‌ಗಳಾದ ಆರ್.ವೈಶಾಲಿ ಮತ್ತು ಹರಿಕಾ ದ್ರೋಣವಳ್ಳಿ ತೀವ್ರ ಪೈಪೋಟಿಯ ಪಂದ್ಯಗಳನ್ನು ಗೆದ್ದು ಪ್ರೀ-ಕ್ವಾರ್ಟರ್ ಫೈನಲ್ ಹಂತವನ್ನು ತಲುಪಿದ್ದಾರೆ. ಭಾರತದ ಕೊನೆರು ಹಂಪಿ ಮತ್ತು ದಿವ್ಯಾ ದೇಶ್ಮುಖ್ ಈಗಾಗಲೇ ಮುಂದಿನ ಸುತ್ತಿಗೆ ಪ್ರವೇಶ ಪಡೆದಿದ್ದಾರೆ. ವೈಶಾಲಿ, ಅಮೆರಿಕದ ಕ್ಯಾರಿಸ್ಸಾ ಯಿಪ್ ವಿರುದ್ಧ ೧೦+೧೦ ರ್‍ಯಾಪಿಡ್ ಟೈ ಬ್ರೆಕ್‌ನಲ್ಲಿ ಗೆಲುವು ಸಾಧಿಸಿದರು. ಪ್ರೀ-ಕ್ವಾಟರ್ ಫೈನಲ್‌ನಲ್ಲಿ ಅವರು, ಕಝಾಕಿಸ್ತಾನದ ಮೆರೂಯರ್ಟ್ ಕಮಲಿಡೆನೋವಾ ಎದುರು ಕಣಕ್ಕಿಳಿಯಲಿದ್ದಾರೆ. ಹರಿಕಾ ಗ್ರೀಸ್‌ನ ಸ್ಟಾವ್ರೌಲಾ ಸೋಲಾಕಿಡೌ ವಿರುದ್ಧ ಟೈ ಬ್ರೆಕ್‌ನಲ್ಲಿ ಗೆದ್ದಿದ್ದಾರೆ. ಅವರು ಮುಂದಿನ ಹಂತದಲ್ಲಿ ರಷ್ಯಾದ ಕಟೆರಿನಾ ಲಾಗ್ನೋ ವಿರುದ್ಧ ಸ್ಪರ್ಧಿಸಲಿದ್ದಾರೆ. ಕ್ರೊವೇಶಿಯಾದ ಟಿಯೋಡೋರಾ ಇಂಜಾಕ್ ವಿರುದ್ಧ ಜಯ ಗಳಿಸಿರುವ ದಿವ್ಯಾ ದೇಶ್ಮುಖ್ ತಮ್ಮ ಮುಂದಿನ ಹಂತದ ಪಂದ್ಯದಲ್ಲಿ ಚೀನಾದ ಜು ಜೀನರ್ ವಿರುದ್ಧ ಕಣಕ್ಕಿಳಿಯಲಿದ್ದಾರೆ. ಕೊನೆರು ಹಂಪಿ ಪೋಲೆಂಡ್‌ನ ಕ್ಲಾಡಿಯಾ ಕುಲಾನ್ ವಿರುದ್ಧ ಜಯ ಗಳಿಸಿ, ಸ್ವಿಟ್ಜರ್‌ಲ್ಯಾಂಡ್‌ನ ಅಲೆಕ್ಸಾಂಡ್ರಾ ಕೊಸ್ಟೆನ್ಯುಕ್ ವಿರುದ್ಧ ಮುಂದಿನ ಸುತ್ತಿನಲ್ಲಿ ಸ್ಪರ್ಧಿಸಲಿದ್ದಾರೆ. ವಂತಿಕಾ ಅಗರ್ವಾಲ್, ಲಾಗ್ನೋ ವಿರುದ್ಧ ಸೋತು ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ.

><><><><><><><><><><><

ಫುಟ್‌ಬಾಲ್‌ನಲ್ಲಿ, ತಾಷ್ಕೆಂಟ್‌ನ ದೋಸ್ಲಿಕ್ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಅಂತಾರಾಷ್ಟ್ರೀಯ ಸೌಹಾರ್ದ ಪಂದ್ಯದಲ್ಲಿ ಭಾರತದ ೨೦ ವರ್ಷದೊಳಗಿನ ಮಹಿಳಾ ತಂಡವು ಉಜ್ಬೇಕಿಸ್ತಾನ್ ವಿರುದ್ಧ ೧-೧ ಗೋಲುಗಳಿಂದ ಡ್ರಾ ಸಾಧಿಸಿತು. ಉಜ್ಬೇಕಿಸ್ತಾನ್ ೩೮ನೇ ನಿಮಿಷದಲ್ಲಿ ಮೆಹ್ರಿಬೊನ್ ಎಗಂಬರ್ಡೀವಾ ಅವರ ಗೋಲಿನೊಂದಿಗೆ ಮುನ್ನಡೆ ಸಾಧಿಸಿತು. ಭಾರತವು ೬೯ನೇ ನಿಮಿಷದಲ್ಲಿ ಸುಲಾಂಜನಾ ರೌಲ್ ಅವರ ಗೋಲಿನೊಂದಿಗೆ ಸಮಬಲ ಸಾಧಿಸಿತು. ಮುಂದಿನ ತಿಂಗಳು ನಡೆಯಲಿರುವ ಎಎಫ್‌ಸಿ ೨೦ ವರ್ಷದೊಳಗಿನ ಮಹಿಳಾ ಏಷ್ಯನ್ ಕಪ್ ಅರ್ಹತಾ ಪಂದ್ಯಗಳಿಗೆ ತಮ್ಮ ನಿರಂತರ ಸಿದ್ಧತೆಗಳ ಭಾಗವಾಗಿ ಭಾರತ ಮತ್ತು ಉಜ್ಬೇಕಿಸ್ತಾನ್ ನಾಳೆ ಮತ್ತೆ ಮುಖಾಮುಖಿಯಾಗಲಿವೆ. ಅರ್ಹತಾ ಪಂದ್ಯಗಳಲ್ಲಿ, ಭಾರತ ತಂಡವು ಆಗಸ್ಟ್ ೬ ರಂದು ಇಂಡೋನೇಷ್ಯಾವನ್ನು, ಆಗಸ್ಟ್ ೮ ರಂದು ತುರ್ಕಮೆನಿಸ್ತಾನವನ್ನು ಮತ್ತು ಆಗಸ್ಟ್ ೧೦ ರಂದು ಯಾಂಗೋನ್‌ನಲ್ಲಿ ಆತಿಥೇಯ ಮ್ಯಾನ್ಮಾರ್ ಅನ್ನು ಎದುರಿಸಲಿದೆ.

><><><><><><><><><><><

ನಮ್ಮ ಮುಂದಿನ ವಾರ್ತಾ ಪ್ರಸಾರ ೧೨ ಗಂಟೆಗೆ

><><><><><><><><><><><